ಲೇಸ್ ಉಡುಗೆಗಳನ್ನು ಎಲ್ಲ ಕಾಲದಲ್ಲೂ ತೊಡಬಹುದಾದರೂ ಬೇಸಿಗೆ ಸಮಯ ಹೆಚ್ಚು ಸೂಕ್ತ. ಈ ಉಡುಗೆಯಲ್ಲಿ ಸರಾಗವಾಗಿ ಗಾಳಿಯಾಡುವುದರಿಂದ ದೇಹವನ್ನು ಸದಾ ತಂಪಾಗಿರಿಸುತ್ತವೆ. ಬೆವರು, ಸೆಕೆಯಿಂದ ದೂರವಿರಬಹುದು. ಈ ಬಟ್ಟೆಗಳ ತೂಕ ಕಡಿಮೆ ಇರುವುದರಿಂದ ದೇಹಕ್ಕೆ ಆರಾಮದಾಯಕ ಅನುಭವ ನೀಡುತ್ತವೆ.



## ಲೇಸ್ ನೆಕ್ಲೇಸ್

ಫ್ಯಾಬ್ರಿಕ್ ನೆಕ್ಲೇಸ್‌ಗಳಂತೆಯೇ ಲೇಸ್‌ಗಳಿಂದಲೂ ಸರ, ನೆಕ್ಲೇಸ್, ಚೋಕರ್, ಪೆಂಡೆಂಟ್ ಮಾಡಬಹುದಾಗಿದೆ. ಕುತ್ತಿಗೆಗೆ ಅಂಟಿಕೊಂಡಂತಿರುವ ಕಪ್ಪು ಬಣ್ಣದ ಲೇಸ್ ನೆಕ್ಲೇಸ್ ಮತ್ತು ಚೋಕರ್ ಮೆಟ್ರೊಪಾಲಿಟನ್ ಹುಡುಗಿಯರ ಹೃದಯ ಕದ್ದಿದೆ. ಟೀಶರ್ಟ್, ಒನ್ ಶೋಲ್ಡರ್ ಡ್ರೆಸ್, ಕುರ್ತಾ, ಶರ್ಟ್, ಡ್ರೆಸ್ ಎಲ್ಲದಕ್ಕೂ ಸೂಕ್ತವೆನಿಸುತ್ತದೆ. ಕಪ್ಪು ಅಥವಾ ಬಿಳಿ ಬಣ್ಣದ ಲೇಸ್ ನೆಕ್ಲೇಸ್ ಎಲಿಗೆಂಟ್ ಲುಕ್ ಕೊಡುವುದರಲ್ಲಿ ಸಂಶಯವಿಲ್ಲ. ಲೇಸ್‌ಗಳನ್ನು ಜಡೆಯಂತೆ ನೇಯ್ದು ತಯಾರಿಸುವ ಚೋಕರ್ ಚಂದ ಕಾಣುತ್ತದೆ. ಲೇಸ್ ಮಧ್ಯ ಒಂದು ದೊಡ್ಡ ಹರಳಿನ ಪೆಂಡೆಂಟ್ ನಿಮ್ಮ ಕತ್ತಿನ ಅಂದ ಹೆಚ್ಚಿಸುತ್ತದೆ.

ಸಮಾರಂಭಗಳಿಗಾಗಿ ಕುಂದನ್, ಮುತ್ತು, ಸೀ ಶೆಲ್‌ಗಳನ್ನು ಲೇಸ್‌ಗಳ ಮೇಲೆ ಅಂಟಿಸಿದರೆ ಕಲಾವಿದನ ಕ್ರಿಯಾಶೀಲತೆ ಬೆಳಕಿಗೆ ಬರುತ್ತದೆ.

## ಕೆಲವೊಂದು ಟಿಪ್ಸ್

- ಲೇಸ್ ಬಟ್ಟೆ ಪಾರದರ್ಶಕವಾಗಿರುವುದರಿಂದ ಲೈನಿಂಗ್ ಬಟ್ಟೆ ಅವಶ್ಯಕ.
- ಲೇಸ್ ಬಟ್ಟೆಗಳನ್ನು ಬ್ರಷ್ ಬಳಸಿ ತೊಳೆಯಬಾರದು. ಸೋಪಿನ ಪುಡಿಯಲ್ಲಿ ನೆನೆ ಹಾಕಿ ನಿಧಾನವಾಗಿ ಕೈಯಲ್ಲಿ ಉಜ್ಜಿ ತೊಳೆದು ನೆರಳಿನಲ್ಲಿ ಒಣಗಿಸಿ.
- ಗಾಢ ಬಣ್ಣದ ಲೇಸ್ ಡ್ರೆಸ್‌ಗಳ ಜೊತೆಗೆ ತಿಳಿ ಬಣ್ಣದ ಡ್ರೆಸ್‌ಗಳನ್ನು ಒಟ್ಟು ಸೇರಿಸಿ ಒಗೆಯಬೇಡಿ. ತಿಳಿ ಬಣ್ಣದ ಮೇಲೆ ಗಾಢ ಬಣ್ಣ ತಾಗಿ ಬಟ್ಟೆಯ ಬಣ್ಣ ಹಾಳಾಗುತ್ತದೆ.
- ದಿನಬಳಕೆಯಲ್ಲಿ ಬಿಳಿ ಮತ್ತು ಕಪ್ಪು ಬಣ್ಣದ ಉಡುಪು ಸೂಕ್ತ. ಮಣಿ ಲೇಸ್‌ಗಳು ತ್ವಚೆಗೆ ಕಿರಿಕಿರಿ ಉಂಟು ಮಾಡುವುದರಿಂದ ದಿನನಿತ್ಯ ಬಳಕೆಗೆ ಯೋಗ್ಯ.
- ಲೇಸ್ ಡ್ರೆಸ್‌ಗಳ ಜೊತೆಗೆ ಮುತ್ತಿನ ಒಡವೆಗಳು ಅದ್ಭುತವಾಗಿ ಕಾಣಿಸುತ್ತವೆ. ಸಣ್ಣದೊಂದು ಮುತ್ತಿನ ಹಾರ, ಕಿವಿಯೋಲೆ, ಬೆಳ್ಳಿ ಅಥವಾ ಆಕ್ಸಿಡೈಸ್ಡ್ ಸಿಂಗಲ್ ಬಳೆ ಅಥವಾ ಬ್ರೇಸ್ಲೆಟ್ ಧರಿಸಿದರೆ ಚಂದ.
- ಪರ್ಫೆಕ್ಟ್ ಮ್ಯಾಚಿಂಗ್ ಬೇಕೆನ್ನುವವರಿಗಾಗಿ ಲೇಸ್ ಜ್ಯುವೆಲ್ಲರಿ ಲಭ್ಯವಿದೆ. ಲೇಸ್‌ಗಳಿಂದ ತಯಾರಿಸಲಾದ ಬಳೆ, ಓಲೆ, ನೆಕ್ಲೇಸ್, ಆ್ಯಂಕ್ಲೆಟ್, ಹೇರ್ ಆಕ್ಸೆಸರೀಸ್ ಲೇಸ್ ಉಡುಪಿಗೆ ಶ್ರೀಮಂತ ಲುಕ್ ನೀಡಲು ತುದಿಗಾಲಿನಲ್ಲಿದೆ.
- ಬಟ್ಟೆಗೆ ಮಾತ್ರ ಏಕೆ, ಒಡವೆಗಳಲ್ಲೂ ಲೇಸ್ ಬಳಸಿದರೆ ಹೇಗೆ ಎಂಬ ಕುತೂಹಲವೇ ಹೊಸ ಆವಿಷ್ಕಾರಕ್ಕೆ ನಾಂದಿ ಹಾಡಿತು. ಫ್ಯಾಬ್ರಿಕ್ ಜ್ಯುವೆಲ್ಲರಿಗಳಂತೆಯೇ ಕಾಣುವ ಈ ಲೇಸ್ ಜ್ಯುವೆಲ್ಲರಿ ಒಡವೆಗಳ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದೆ. ಅದೆಷ್ಟೋ ಗೃಹಿಣಿಯರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.

ಉತ್ತಮ ಗುಣಮಟ್ಟದ ಲೇಸ್ ಬಳಸಿದರೆ ತುಂಬ ದಿನ ಬಾಳಿಕೆ ಬರುತ್ತದೆ. ನಿಮ್ಮ ಉಡುಪಿನ ಬಣ್ಣಕ್ಕೆ ಮ್ಯಾಚ್ ಆಗುವಂಥದ್ದೇ ಆಭರಣಗಳನ್ನು ಖರೀದಿಸುವ ಅವಕಾಶವಿದೆ.

## ಲೇಸ್ ಬ್ರೇಸ್ಲೆಟ್

ಲೇಸ್‌ನಿಂದ ತಯಾರಿಸಿದ ಫಂಕಿ ಫಿಂಗರ್ ರಿಂಗ್ ಜೊತೆಗೆ ಲೇಸ್ ಬ್ರೇಸ್ಲೆಟ್ ಅದ್ಭುತ ಕಾಂಬಿನೇಷನ್. ಗಾಢ ಬಣ್ಣಗಳಾದ ಕೆಂಪು, ಗುಲಾಬಿ, ನೀಲಿ, ಕಪ್ಪುಬಣ್ಣಗಳು ಕೈಗಳ ಅಂದ ಇಮ್ಮಡಿಗೊಳಿಸುತ್ತವೆ. ಹಳತಾದ ಬಣ್ಣಗೆಟ್ಟ ಬಳೆಗಳನ್ನು ಬಿಸಾಡುವ ಬದಲು ಲೇಸ್‌ಗಳನ್ನು ನೀಟಾಗಿ ಸುತ್ತಿ ಅಂಟಿಸಿ, ಕುಂದನ್‌ಗಳಿಂದ ಅಲಂಕರಿಸಿ ಹೊಸ ಬಳೆಯಾಗಿ ಧರಿಸಬಹುದು. ಸಿಲ್ಕ್ ಥ್ರೆಡ್ ಬಳೆಗಳಂತೇ ಕಾಣುತ್ತವೆಯಾದರೂ ಕಡಿಮೆ ಬೆಲೆಯಲ್ಲಿ ಹೆಚ್ಚಿನ ಕಳೆಕಟ್ಟುತ್ತವೆ.

## ಲೇಸ್ ಆ್ಯಂಕ್ಲೆಟ್

ಕಾಲಿನ ಗೆಜ್ಜೆ ಎನ್ನುವ ಪದವೇ ಉತ್ಸಾಹ ತರುವಂಥದ್ದು. ಗೆಜ್ಜೆಯ ದನಿ ಮನೆ ತುಂಬ ಕೇಳುವುದೇ ಚಂದ ಎನ್ನುತ್ತಿದ್ದ ಕಾಲ ಮಾಯವಾಗಿ ಸದ್ದೇ ಇಲ್ಲದ ಸಾವಿರ ನಮೂನೆಯ ಗೆಜ್ಜೆಗಳು ಮಾರುಕಟ್ಟೆಯಲ್ಲಿವೆ. ಡ್ರೆಸ್ ಬದಲಾಯಿಸಿದಂತೇ ಗೆಜ್ಜೆ ಸಹ ಬದಲಾಗಬೇಕೆಂದರೆ ಲೇಸ್ ಆ್ಯಂಕ್ಲೆಟ್ ಉತ್ತಮ ಆಯ್ಕೆ. ಪ್ರತಿ ಉಡುಪಿಗೂ ಒಂದೊಂದು ಆ್ಯಂಕ್ಲೆಟ್ ಧರಿಸಿ ಫ್ಯಾಷನ್ ಮೆರೆಯಬಹುದು. ಲೇಸ್ ಜೊತೆಗೆ ಕಪ್ಪೆ ಚಿಪ್ಪುಗಳನ್ನು ಪೋಣಿಸಿದ ಗೆಜ್ಜೆ ಜನಪ್ರಿಯವಾಗಿದೆ. ಬೀಚ್ ಡ್ರೆಸ್‌ಗಳಂತೆಯೇ ಬೀಚ್ ಟ್ರಿಪ್‌ಗಳ ಫೋಟೊಶೂಟ್‌ಗೆ ಕಪ್ಪೆ ಚಿಪ್ಪುಗಳಿಂದ ಹೆಣೆದ ಲೇಸ್ ಜ್ಯುವೆಲ್ಲರಿ ಅದ್ಭುತ ಕಾಂಬಿನೇಷನ್.

## ತಲೆಗೂದಲ ಅಲಂಕಾರಕ್ಕೆ

ಹೇರ್ ಬ್ಯಾಂಡ್, ರಬ್ಬರ್ ಬ್ಯಾಂಡ್, ಲೇಸ್ ಫ್ಲವರ್‌ಗಳಿಂದ ಕೂದಲನ್ನು ಅಲಂಕರಿಸಿದರೆ ಅದ್ಭುತವಾಗಿರುತ್ತದೆ. ಮಕ್ಕಳು ಇಷ್ಟಪಡುವ ಬರ್ತ್‌ಡೇ ಕ್ರೌನ್‌ಗಳಿಗೂ ಲೇಸ್‌ಗಳು ಉತ್ತಮ. ಕೂದಲಿಗೆ ಹಾನಿ ಉಂಟು ಮಾಡದ ಸಾಫ್ಟ್‌ಲೇಸ್‌ಗಳು ಎಲ್ಲ ಋತುಮಾನಕ್ಕೂ ಸೂಕ್ತ. ಲೋಟಸ್, ರೋಸ್ ಫ್ಲವರ್ ಬನ್‌ಗಳನ್ನು ತಯಾರಿಸಿ ತುರುಬಿಗೆ ಹಾಕಿಕೊಂಡರೆ ಸಾಂಪ್ರದಾಯಿಕ ಶೈಲಿಯ ನೋಟ ನಿಮ್ಮದಾಗುತ್ತದೆ.



## ಲೇಸ್ ಕಿವಿಯೋಲೆ

ಯಾವುದೇ ಆಭರಣ ಇಲ್ಲದಿದ್ದರೂ ಹುಡುಗಿಯರಿಗೆ ಕಿವಿಯೋಲೆಗಳ ಮೇಲಿನ ಕ್ರೇಜ್ ಅಜರಾಮರ. ಹೊಸ ಹೊಸ ಬಗೆಯ ಹ್ಯಾಂಗಿಂಗ್, ಜುಮುಕಿ, ಲೋಲಾಕು, ಸ್ಟಡ್ಸ್, ಬಟನ್ ರಿಂಗ್, ಹೂಪ್ಸ್ ಹೀಗೆ ಪಟ್ಟಿ ಮುಂದುವರಿಯುತ್ತದೆ. ಲೇಸ್‌ಗಳನ್ನು ವೃತ್ತಾಕಾರ, ಓವಲ್, ಚೌಕ ಆಕಾರದಲ್ಲಿ ವಿನ್ಯಾಸ ಮಾಡಿ ತಯಾರಿಸಿದ ಈ ಕಿವಿಯೋಲೆಗಳು ಹಗುರವಾಗಿರುತ್ತವೆ. ಹೂಪ್ಸ್ ಕಿವಿಯೋಲೆಯ ತುದಿಯಲ್ಲಿ ಚಿಕ್ಕದಾದ ಚೊಕ್ಕದಾದ ಲೇಸ್ ಕೂಡಿಸಿದರೆ ಅದರ ಕಳೆಯೇ ಬೇರೆ. ಒಂದಿಷ್ಟು ಸಾಮಗ್ರಿಗಳನ್ನು ತಂದಿಟ್ಟುಕೊಂಡು ನಿಮ್ಮ ಕೈಯಲ್ಲಿ ನೀವೇ ಲೇಸ್ ಕಿವಿಯೋಲೆ ಮಾಡಿ ಖುಷಿಪಡಬಹುದು.